( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ 04/02/2020
ಅಸಲು ದಾವೆ.ನಂ.180/2009
ಡಿ.ಡಬ್ಲ್ಯೂ 1

( ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್.ಹೆಚ್.ಆರ್. ವಕೀಲರಿಂದ )

ದಿಃ*28-03-1979* ರ ಸಾಗುವಳಿ ಚೀಟಿಯ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-*2* ಎಂದು ಗುರುತಿಸಲಾಯಿತು. ದೀ*20-03-1979* ರಲ್ಲಿ ಒಂದು ಸಾವಿರ ರೂ.ಗಳನ್ನು ಪಂಚಾಯಿತಿಗೆ ಪಾವತಿ ಮಾಡಿದ ಬಗ್ಗೆ ರಶೀದಿಯ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-*3* ಎಂದು ಗುರುತಿಸಲಾಯಿತು. ಎಂ.ಆರ್.ನಂಃ*20/1979-80* ರ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-*4* ಎಂದು ಗುರುತಿಸಲಾಯಿತು. ನಿವೇಶನ ನಂಃ *121* ರ *14* ಅಸೆಸ್ ಮೆಂಟ್ ರಿಜಿಸ್ಟರ್ ನ ದೃಡೀಕೃತ ನಕಲುಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ನಿಡಿ-*5* ರಿಂದ ನಿಡಿ-*18* ಎಂದು ಗುರುತಿಸಲಾಯಿತು. ದಿಃ*15-12-1998* ರಂದು ಹುಚ್ಚೇಗೌಡರು ನನಗೆ ಬರೆದುಕೊಟ್ಟಿರು ಕ್ರಯ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-*19* ಎಂದು ಗುರುತಿಸಲಾಯಿತು. ನನ್ನ ಹೆಸರಿಗೆ *1998-99* ನೇ ಸಾಲಿನಲ್ಲಿ ಹುಚ್ಚೇಗೌಡರಿಂದ ಖರೀದ ಮಾಡಿದ ಸ್ವತ್ತಿನ ಖಾತೆ ಬದಲಾವವಣೆ ಯಾದ ಬಗ್ಗೆ ಡಿಮ್ಯಾಂಡ್ ರಿಜಿಸ್ಟರ್ ನ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-*20* ಎಂದು ಗುರುತಿಸಲಾಯಿತು. ಹುಚ್ಚೇಗೌಡರಿಂದ ಕ್ರಯಕ್ಕೆ ಪಡೆದದಿ ನಿವೇಶನದಲ್ಲಿ ಮನೆ ಕಟ್ಟಲುಎ ದಿಃ*25-01-199* ರಲ್ಲಿ ರಾಮನಾಥಪುರ ಗ್ರಾಮ ಪಂಚಾಯಿತಿಯಿಂದ ನೀಡಿ ಬಿಲ್ಡಿಂಗ್ ಪರವಾನಗಿಯ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-*21* ಎಂದು ಗುರುತಿಸಲಾಯಿತು. ನಿವೇಶನ ನಂಃ *121* ರ *1999-2000* ನೇ ಸಾಲಿನ ತೆರಿಗೆ ಪಟ್ಟಿಯ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-*22* ಎಂದು ಗುರುತಿಸಲಾಯಿತು. ದಿಃ*02-08-2016* ರಂದು ಹುಚ್ಚೇಗೌಡರು ಬರೆದುಕೊಟ್ಟ ತಿದ್ದು ಪಡಿ ಪತ್ರವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ*23* ಎಂದು ಗುರುತಿಸಲಾಯಿತು. ಅಸಲು ದಾವಾ ನಂಃ *215/1999* ರ ಡಿಕ್ರಿಯ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ*24* ಎಂದು ಗುರುತಿಸಲಾಯಿತು. ಆರ್.ಎಸ್.ಎ. ನಂಃ *982/2011* ರ ಆದೇಶದ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-*25* ಎಂದು ಗುರುತಿಸಲಾಯಿತು. ಹುಚ್ಚೇಗೌಡರಿಂದ ನಾನು ಕ್ರಯಕ್ಕೆ

ಖರೀದಿ ಮಾಡಿದ ಸ್ವತ್ತಿನ *3* ಇ-ಸ್ವತ್ತು ಖಾತೆಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ-*26* ರಿಂದ ನಿಡಿ-*28* ಎಂದು ಗುರುತಿಸಲಾಯಿತು.ಭೂಮಾಪಾನ ಇಲಾಖೆಯವರು ಈ-ಸ್ವತ್ತು ದಾಖಲು ಮಾಡು ಮುನ್ನ ಸ್ಥಳಪರಿಶೀಲಿಸಿ ಮಾಡಿದ ಸ್ಕೆಚ್ ನ *3* ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಡಿ*29* ರಿಂದ ನಿಡಿ-*31* ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದರಿಂದ ಅನುಮತಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.